ಕರ್ನಾಟಕ ಸರ್ಕಾರ

ಸಂಖ್ಯೆ:ಪಪೂಶಿ/ಸಿಬ್ಬಂದಿ-3/ಪಾಲಿಸಿ/ಸಿ.ಸೇ.ನಿ/2020-21

ನಿರ್ದೇಶಕರ ಕಛೇರಿ,
ಪದವಿ ಪೂರ್ವ ಶಿಕ್ಷಣ ಇಲಾಖೆ,
18ನೇ ಅಡ್ಡರಸ್ತೆ, ಮಲ್ಲೇಶ್ವರ,
ಬೆಂಗಳೂರು-560012.
ದಿನಾಂಕ: -11-2020.
15/12/2020

**ಸುತ್ತೋಲೆ**

ವಿಷಯ:- ಖಾಸಗಿ ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿನ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ಮೂಲ ಸೇವಾವಹಿಗಳನ್ನು ಕೆಲವೊಂದು ಆಡಳಿತ ಮಂಡಳಿಗಳು ನಿಯಮಬಾಹಿರವಾಗಿ ತಮ್ಮ ಸ್ವಾಧೀನದಲ್ಲಿಟ್ಟು ಕೊಂಡಿದ್ದಾರೆ ಎನ್ನಲಾದ ದೂರಿನ ಕುರಿತು.

ಉಲ್ಲೇಖ:- ಕರ್ನಾಟಕ ನಾಗರೀಕಾ ಸೇವಾ ನಿಯಮಾವಳಿಗಳ ನಿಯಮ 397 ಮತ್ತು 398.

******

ರಾಜ್ಯದ ಖಾಸಗಿ ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ಸೇವೆ ಸಲ್ಲಿಸುತ್ತಿರುವ ಅನುದಾನಿತ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳಿಗೆ ನಿಯಮಾನುಸಾರ ಕಾಲಕಾಲಕ್ಕೆ ಪ್ರಾಪ್ತವಾಗುವ ವಾರ್ಷಿಕ ವೇತನ ಬಡ್ತಿ, ಕಾಲಮಿತಿ, ಸ್ವಯಂಚಾಲಿತ, ಆಯ್ಕೆಕಾಲಿಕ ವೇತನ ಶ್ರೇಣಿ/ಬಡ್ತಿ 1ನೇಹೆಚ್ಚುವರಿ, 2ನೇ ಹೆಚ್ಚುವರಿ ಮತ್ತು 03ನೇ ಹೆಚ್ಚುವರಿ ವೇತನ ಬಡ್ತಿ ಹಾಗೂ ಸ್ಥಗಿತ ವೇತನ ಬಡ್ತಿಗಳನ್ನು ಹಾಗೂ ಪಿಂಚಣಿ ಪ್ರಸ್ತಾವನೆಗಳನ್ನೊಳಗೊಂಡಂತೆ ಆಯಾ ಕಾಲೇಜಿನ ನೇಮಕಾತಿ ಮತ್ತು ಶಿಸ್ತು ಪ್ರಾಧಿಕಾರವಾದ ಆಡಳಿತ ಮಂಡಳಿಗಳು ಆರ್ಥಿಕ ಸೌಲಭ್ಯಗಳನ್ನು ಸಿಬ್ಬಂದಿಗಳಿಗೆ ಮಂಜೂರು ಮಾಡಿ ಸದರಿ ಮಂಜೂರಾತಿ ಅನುಮೋದನೆಗಾಗಿ ಜಿಲ್ಲಾ ಉಪ ನಿರ್ದೇಶಕರುಗಳ ಮೂಲಕ ನಿಯಮಾನುಸಾರ ನಿರ್ದೇಶನಾಲಯಕ್ಕೆ ಪ್ರಸ್ತಾವನೆ ಸಲ್ಲಿಸಬೇಕಾಗುತ್ತದೆ.

ಕೆಲವು ಆಡಳಿತ ಮಂಡಳಿಗಳು ವಾರ್ಷಿಕ ವೇತನ ಬಡ್ತಿ, ಕಾಲಮಿತಿ, ಸ್ವಯಂಚಾಲಿತ, ಆಯ್ಕೆಕಾಲಿಕ ವೇತನ ಶ್ರೇಣಿ/ಬಡ್ತಿ 1ನೇಹೆಚ್ಚುವರಿ, 2ನೇ ಹೆಚ್ಚುವರಿ ಮತ್ತು 03ನೇ ಹೆಚ್ಚುವರಿ ವೇತನ ಬಡ್ತಿ ಹಾಗೂ ಸ್ಥಗಿತ ವೇತನ ಬಡ್ತಿಗಳನ್ನು ಹಾಗೂ ಪಿಂಚಣಿ ಪ್ರಸ್ತಾವನೆಗಳನ್ನೊಳಗೊಂಡಂತೆ ಸಿಬ್ಬಂದಿಗಳಿಗೆ ಆರ್ಥಿಕ ಸೌಲಭ್ಯಗಳನ್ನು ಮಂಜೂರು ಮಾಡುವುದಕ್ಕೆ ನಿಯಮಬಾಹಿರವಾಗಿ ಹಣದ ಬೇಡಿಕೆಗಳನಿಡುತ್ತಿರುವುದಾಗಿ ಹಾಗೂ ಕೆಲವು ಆಡಳಿತ ಮಂಡಳಿಗಳು ಸಿಬ್ಬಂದಿಗಳ ಸೇವಾವಹಿಗಳನ್ನು ಕಾಲೇಜಿನ ಮುಖ್ಯಸ್ಥರಾದ ಪ್ರಾಂಶುಪಾಲರ ಅಭಿರಕ್ಷೆಗೆ ಕೊಡುವುದರ ಬದಲಾಗಿ ಆಡಳಿತ ಮಂಡಳಿಗಳು ತನ್ನ ಸ್ವಾಧೀನದಲ್ಲಿಟ್ಟುಕೊಂಡು ಅನಗತ್ಯ ಕಿರುಕುಳ ಮತ್ತು ಮಾನಸಿಕ ಹಿಂಸೆ ನೀಡುತ್ತಿದ್ದು, ನೆಮ್ಮದಿಯಾಗಿ ಸೇವೆಯನ್ನು ಸಲ್ಲಿಸಲು ಸಾಧ್ಯವಾಗುತ್ತಿಲ್ಲವೆಂದು ದೂರಿ ಆಡಳಿತ ಮಂಡಳಿಗಳ ವಿರುದ್ಧ ಅಗತ್ಯ ಕ್ರಮ ಕೈಗೊಂಡು ನ್ಯಾಯ ಒದಗಿಸುವಂತೆ ಇಲಾಖೆಗೆ ಸಿಬ್ಬಂದಿಗಳು ಮನವಿ ಸಲ್ಲಿಸಿರುತ್ತಾರೆ.

ಕೆಲವೊಂದು ಪ್ರಕರಣಗಳಲ್ಲಿ ಅನುದಾನಿತ ಸಿಬ್ಬಂದಿಗಳಿಗೆ ಸಕಾಲಕ್ಕೆ ಲಭ್ಯವಾಗಬೇಕಾದ ಆರ್ಥಿಕ ಸೌಲಭ್ಯಗಳನ್ನು ಒದಗಿಸದೇ ಇರುವುದರಿಂದ ಹಾಗೂ ಸಿಬ್ಬಂದಿಗಳ ಪಿಂಚಣಿ ಪ್ರಸ್ತಾವನೆಗಳನ್ನು ಸಕಾಲದಲ್ಲಿ ಆಡಳಿತ ಮಂಡಳಿಗಳು ಮಂಜೂರು ಮಾಡಿ ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸದೇ ಇರುವುದರಿಂದ ಅಂತಹ ಭಾದಿತ ಸಿಬ್ಬಂದಿಗಳು ಮಾನ್ಯ ನ್ಯಾಯಾಲಯದ ಮೊರೆ ಹೋಗುತ್ತಿರುವುದನ್ನು ಸಹ ಇಲಾಖೆಯ ಗಮನಕ್ಕೆ ಬಂದಿರುತ್ತದೆ.

ಈ ವಿಷಯವನ್ನು ಇಲಾಖೆಯು ಅತ್ಯಂತ ಗಂಭೀರವಾಗಿ ಪರಿಗಣಿಸಿದೆ. ಕರ್ನಾಟಕ ನಾಗರೀಕಾ ಸೇವಾ ನಿಯಮಾವಳಿಗಳ, ನಿಯಮ 397 ರನ್ವಯ ಕಾಲೇಜಿನ ಮುಖ್ಯಸ್ಥರಾದ ಪ್ರಾಂಶುಪಾಲರ ವಶದಲ್ಲಿ / ಅಭಿರಕ್ಷೆಯಲ್ಲಿ ಸೇವಾವಹಿಗಳು ಇರತಕ್ಕದ್ದು. ಹಾಗೂ ಕರ್ನಾಟಕ ನಾಗರೀಕಾ ಸೇವಾ ನಿಯಮಾವಳಿಗಳ, ನಿಯಮ 398 ರನ್ವಯ ಕಾಲೇಜಿನ ಮುಖ್ಯಸ್ಥರಾದ ಪ್ರಾಂಶುಪಾಲರೇ ಸೇವಾ ವಹಿಗಳನ್ನು ನಿಯಮಾನುಸಾರ ನಿರ್ವಹಿಸಬೇಕಾಗುತ್ತದೆ.

ಕರ್ನಾಟಕ ನಾಗರೀಕಾ ಸೇವಾ ನಿಯಮಾವಳಿಗಳ, ನಿಯಮ 407 ರನ್ವಯ ತನ್ನ ಆಡಳಿತದ ನಿಯಂತ್ರಣದಲ್ಲಿರುವ ಸಿಬ್ಬಂದಿಗಳಿಗೆ ಪ್ರತೀ ವರ್ಷವು ಅವರವರ ಸೇವಾವಹಿಗಳನ್ನು ತೋರಿಸಿ, ಅವರವರುಗಳಿಂದ ಅವರ ಸೇವಾಪುಸ್ತಕಗಳನ್ನು ವೀಕ್ಷಿಸಿದ ಬಗ್ಗೆ ಸಹಿಗಳನ್ನು ಪಡೆದುಕೊಳ್ಳುವುದಾಕ್ಕಾಗಿ ಕ್ರಮ ಕೈಗೊಳ್ಳಬೇಕಾಗಿದ್ದು ಕಾಲೇಜಿನ ಮುಖ್ಯಸ್ಥರಾದ ಪ್ರಾಂಶುಪಾಲರ ಆದ್ಯ ಕರ್ತವ್ಯವಾಗಿರುತ್ತದೆ. ಇದರಂತೆ ರಾಜ್ಯದ ಎಲ್ಲಾ ಖಾಸಗಿ ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿನ ಅನುದಾನಿತ ಸಿಬ್ಬಂದಿಗಳ ಸೇವಾವಹಿಯನ್ನು ಕಾಲೇಜಿನ ಮುಖ್ಯಸ್ಥರಾದ ಪ್ರಾಂಶುಪಾಲರೇ ನಿರ್ವಹಿಸತಕ್ಕದ್ದೆಂದು ಈ ಮೂಲಕ ಕಟ್ಟುನಿಟ್ಟಾಗಿ ಸೂಚಿಸಿದೆ.

ಖಾಸಗಿ ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿನ ಅನುದಾನಿತ ಸಿಬ್ಬಂದಿಗಳ ಸೇವಾ ವಹಿಗಳನ್ನು ನಿಯಮಬಾಹಿರವಾಗಿ ಆಡಳಿತ ಮಂಡಳಿಗಳೇ ತಮ್ಮ ಸ್ವಾಧೀನದಲ್ಲಿ ಇಟ್ಟುಕೊಂಡಿರುವ ಪ್ರಕರಣಗಳನ್ನು ಆಯಾ ಜಿಲ್ಲಾ ಉಪ ನಿರ್ದೇಶಕರಗಳು ಪತ್ತೆಹಚ್ಚಿ ಈ ರೀತಿ ಪ್ರಕರಣಗಳು ತಮ್ಮ ಜಿಲ್ಲಾ ವ್ಯಾಪ್ತಿಯಲ್ಲಿ ಎಷ್ಟಿವೆ? ಎಂಬುದರ ಬಗ್ಗೆಗಿನ ಸಂಪೂರ್ಣ ಮಾಹಿತಿಯನ್ನು ನಿರ್ದೇಶನಾಲಯಕ್ಕೆ ಸಲ್ಲಿಸುವಂತೆ ರಾಜ್ಯದ ಎಲ್ಲಾ ಜಿಲ್ಲಾ ಉಪ ನಿರ್ದೇಶಕರುಗಳಿಗೆ ಈ ಮೂಲಕ ನಿರ್ದೇಶಿಸಿದೆ.

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ.

ಗೆ,

ರಾಜ್ಯದ ಎಲ್ಲಾ ಜಿಲ್ಲಾ ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಇವರಿಗೆ ಮುಂದಿನ ಅಗತ್ಯ ಕ್ರಮಕ್ಕಾಗಿ

ಪ್ರತಿಗಳು ಮಾಹಿತಿಗಾಗಿ :-

1. ನಿರ್ದೇಶಕರ ಆಪ್ತಶಾಖೆಗೆ
2. ಜಂಟಿ ನಿರ್ದೇಶಕರ / ಉಪ ನಿರ್ದೇಶಕರ (ಮಾ&ಅ) ಆಪ್ತಶಾಖೆ.
3. ಸಹಾಯಕ ನಿರ್ದೇಶಕರು ಇ-ಆಡಳಿತ ಇವರು ಇಲಾಖಾ ಅಂತರ್ಜಾಲದಲ್ಲಿ-ಅಳವಡಿಸುವುದು.
4. ರಾಜ್ಯದ ಎಲ್ಲಾ ಖಾಸಗಿ ಅನುದಾನಿತ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರುಗಳಿಗೆ, ವಿದ್ಯಾಸಂಸ್ಥೆಯ ಆಡಳಿತ ಮಂಡಳಿಗಳ ಗಮನಕ್ಕೆ ತರುವಂತೆ ತಿಳಿಸಿದೆ.
5. ಸಿಬ್ಬಂದಿ-3 ಶಾಖೆಯ ಅಧಿಕಾರಿ / ಸಿಬ್ಬಂದಿಗಳಿಗೆ.
6. ಕಛೇರಿ / ಹೆಚ್ಚುವರಿ.

S. R maintainance